ಮೂಲ ದಾವಾ ಸಂಖ್ಯೆ 2/2013

ಡಿ ಡಬ್ಲ್ಯೂ-1

**(ದಿನಾಂಕ 21.09.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ವಾದಿ ಪರ ಶ್ರೀ ಕೆ ಜಿ ಕೆ ಎಸ್ ವಕೀಲರಿಂದಃ-**

ನಾನು ಎಸ್ ಎಸ್ ಎಲ್ ಸಿ ಓದಿರುತ್ತೇನೆ. ನಾನು ಮೂಲತಃ ಹಗರಿಗುಡಿಹಳ್ಳಿ ವಾಸಿ ಎಂದರೆ ಸರಿ. ಪೂರ್ವಿಕ ಕಾಲ ದಿಂದಲೂ ನಾನು ಹಗರಿಗುಡಿಹಳ್ಳಿ ವಾಸಿ ಎಂದರೆ ಸರಿ. ನನಗೆ ತುಂಬಾ ವ್ಯವಹಾರಿಕ ಮತ್ತು ಪ್ರಾಪಂಚಿಕ ಜ್ಞಾನ ಇದೆ ಸಾಮಾನ್ಯ ಜ್ಞಾನ ಇದೆ. ನಾನು ಹಗರಿಗುಡಿಹಳ್ಳಿಯ ಮಂಡಲ ಪಂಚಾಯತಿಯಲ್ಲಿ ಸ್ಪರ್ದಿಸಿದ್ದೆ ಎಂದರೆ ಸರಿ. ನಾನು ಚುನಾಯಿತ ನಾಗಿದ್ದೆ ಎಂದರೆ ಸರಿ. ಅಧ್ಯಕ್ಷ ಕೂಡ ಆಗಿದ್ದೆ ಎಂದರೆ ಸರಿಯಲ್ಲ. ದಾವೆಯನ್ನು ಮಹಾದೇವಮ್ಮ ಹೂಡಿರುತ್ತಾರೆ. ಪ್ರತಿವಾದಿ ಪತ್ರ ಸಲ್ಲಿಸಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಪ್ರತಿವಾದ ಪತ್ರದಲ್ಲಿ ಬರೆದ ವಿಚಾರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ. ಆ ಸಂಧರ್ಭದಲ್ಲಿ ಏನು ಪರಿಹಾರ ಕೋರಿದ್ದಾರೆಂದು ಗೊತ್ತಾಗಿರುತ್ತದೆ. ದಾವಾದಲ್ಲಿ ಎಷ್ಟು ಆಸ್ತಿ ಇದೆ ಅಂತಾ ಗೊತ್ತಾಯಿತು ಎಂದರೆ ಸರಿ. 4 ಆಸ್ತಿಗಳು ಇರುತ್ತವೆ. ಕೇಸಿನ ಕಾನೂನಿನ ಬಗ್ಗೆ ಅಷ್ಟು ಅರಿವು ಇಲ್ಲಾ. ಇಂತಿಂತಹ ಕಾನೂನಿನಲ್ಲಿ ಅನ್ವಯ ಆಗುತ್ತದೆ ಅಂತಾ ನಾನು ವಕೀಲರಿಗೆ ಮಾಹಿತಿಯನ್ನು ಹೇಳಿದ್ದೇನೆ. ರೆಸ್ಸಜುಡಿಕೇಟ ಎಂಬ ಪದ ನನಗೆ ಗೊತ್ತಿಲ್ಲಾ. ತಕರಾರಿನಲ್ಲಿ ರೆಸ್ಸಜುಡಿಕೇಟ ಬಗ್ಗೆ ಓದಿದ್ದೇನೆ. ವಕೀಲರಿಂದ ಅದರ ಬಗ್ಗೆ ತಿಳಿದುಕೊಂಡಿರುತ್ತೇನೆ. ಪರಿಹಾರ ಕೇಳಿರುವುದು ಕಾನೂನು ಬಾಹೀರ ಅಂತಾ ಬರೆಸಿರುವುದು ಅಸಮರ್ಪಕ ಎಂದರೆ ಸರಿಯಲ್ಲ.

ನಮ್ಮ ಮನೆತನದ ಮೂಲ ಪುರಷ ತೆಂಬದ ಸಿದ್ದಲ್ಲಿಂಗಪ್ಪ ಅವರಿಗೆ ಬಸ್ಸಮ್ಮ ಅಂತಾ ಹೆಂಡತಿ ಎಂದರೆ ಸರಿ. ತೆಂಬದ ಸಿದ್ದಲಿಂಗಪ್ಪನಿಗೆ 2 ಜನ ಗಂಡು ಮಕ್ಕಳು 2 ಹೆಣ್ಣು ಮಕ್ಕಳು. ರೇವಣಸಿದ್ದಪ್ಪ, ಈಶ್ವರಪ್ಪ, ಕಾಳಮ್ಮ, ಚಂದ್ರಮ್ಮ ಇರುತ್ತಾರೆ. ಅವರಲ್ಲಿ ರೇವಣಸಿದ್ದಪ್ಪ

ಮತ್ತು ಈಶ್ವರಪ್ಪ ಮರಣ ಹೊಂದಿದ್ದಾರೆ ಎಂದರೆ ಸರಿ. ರೇವಣಸಿದ್ದಪ್ಪ ಇವರಿಗೆ ಕಾಳಮ್ಮನ ಜೊತೆ ವಿವಾಹ ಆಗಿತ್ತು ಎಂದರೆ ಸರಿ. ಸದರಿಯವರಿಗೆ 4 ಹೆಣ್ಣು 2 ಗಂಡು. ರೇವಣಸಿದ್ದಪ್ಪನ ಮಕ್ಕಳು ಎಲ್ಲಾರು ಪ್ರತಿವಾದಿಯರು ಎಂದರೆ ಸರಿ. ರೇವಣಸಿದ್ದಪ್ಪನ ಮಗ ಈಶ್ವರಪ್ಪನ ಮದುವೆ ಯಾರ ಜೊತೆ ಆಗಿರುತ್ತದೆ ಎಂದರೆ ಮಹಾದೇವಮ್ಮ ರವರ ಜೊತೆ ಆಗಿರುತ್ತದೆ. ಆಗ ನಾನು ಜನಿಸಿರಲ್ಲಿಲ್ಲ. ಈಶ್ವರಪ್ಪ ಮತ್ತು ಮಹಾದೇವವಮ್ಮ ರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ತವರು ಮನೆ ದಾವಣಗೆರೆ ತಾಲೂಕಿನ ಕಿತ್ತೂರು ಎಂದರೆ ಸರಿ. ಮಹಾದೇವಮ್ಮನ ಮನೆತನವನ್ನು ಸಣ್ಣ ಮನೆಯವರು ಅಂತಾ ಕರೆಯುತ್ತಾರೆ ಎಂದರೆ ಇರಬಹುದು. ನಮ್ಮ ಮನೆತನವನ್ನು ತೆಂಬದವರ ಮನೆತನ ಅಂತಾ ಹೇಳುತ್ತಾರೆ ಎಂದರೆ ಸರಿ. ಹಗರಿಗುಡಿಯಲ್ಲಿ ನಮ್ಮ ಮನೆತನವನ್ನು ಹೊರತುಪಡಿಸಿ ತೆಂಬದವರ ಮನೆತನದವರು ಬೇರೆ ಯಾರು ಇಲ್ಲಾ ಎಂದರೆ 6 ಕುಂಟುಂಬಗಳು ಇವೆ ಎನ್ನುತ್ತಾರೆ. ಮಹಾದೇವಮ್ಮ ರವರ ತವರು ಮನೆತನವನ್ನು ಹೊರತುಪಡಿಸಿ ಬೇರೆ ಯಾರು ಸಣ್ಣ ಮನೆಯವರು ಅಂತಾ ಇಲ್ಲಾ ಎಂದರೆ ಗೊತ್ತಿಲ್ಲಾ. ಈಶ್ವರಪ್ಪನ ಮರಣ ನಂತರ ಮಹಾದೇವಮ್ಮನವರು ನಮ್ಮ ಜೊತೆಗೆ ಹೊಂದಾಣಿಕೆ ಆಗದ ಕಾರಣ ಕಿತ್ತೂರಿಗೆ ಹೋಗಿ ತವರುಮನೆಗೆ ಬಂದು ವಾಸ ಮಾಡಲು ಪ್ರಾರಂಭಿಸಿದರು ಎಂದರೆ ಗೊತ್ತಿಲ್ಲಾ. ಕಿತ್ತೂರು ಮತ್ತು ಹಗರಿಗುಡಿಹಳ್ಳಿ ವೈವಾಹಿಕ ಸಂಬಂಧಗಳು ಸಾಕಷ್ಟು ಬೆಳೆದಿದೆ ಎಂದರೆ ಸರಿ. ಹೀಗಾಗಿ ಕಿತ್ತೂರು ಗ್ರಾಮದ ಜೊತೆ ನಿರಂತರ ಸಂಪರ್ಕ ಇತ್ತು ಎಂದರೆ ಸರಿಯಲ್ಲ. ಕಿತ್ತೂರಿನಲ್ಲಿ ಸಣ್ಣ ಮನೆತನದವರನ್ನು ಹೊರತುಪಡಿಸಿ ನಮಗೆ ಬೇರೆ ಸಂಬಂಧಿಕರು ಇದ್ದಾರೆ ಎಂದರೆ ಸರಿ. ಕಿತ್ತೂರು ವಾಸಿ ಅಂಗಡಿ ಈಶಪ್ಪ ನನಗೆ ಗೊತ್ತು. ಅವರು ನನ್ನ ಹೆಂಡತಿಯ ಸೋದರ ಮಾವ. ಈಶ್ವರಪ್ಪ ಬದುಕಿಲ್ಲಾ ಎಂದರೆ ಸರಿ. ಈಶ್ವರಪ್ಪನ ಜೀವಿತಾಅವಧಿಯಲ್ಲಿ ನಾನು ಕಿತ್ತೂರಿನಲ್ಲಿ ನಿರಂತರ

ಸಂಪರ್ಕ ಹೊಂದಿದ್ದೆ ಎಂದರೆ ಸರಿ. ಈಶ್ವರಪ್ಪನ ಮರಣ ನಂತರ ಅವರ ಮಕ್ಕಳೊಂದಿಗೆ ಸಂಪರ್ಕದಲ್ಲಿ ಇದ್ದೇನೆ ಎಂದರೆ ಸರಿ.

ಈಶ್ವರಪ್ಪ ಮತ್ತು ಮಹಾದೇವಮ್ಮ ಹರಿಹರ ನ್ಯಾಯಾಲಯ ಓ ಎಸ್ ನಂಬರ 31/2005 ನ್ನು ದಾಖಲಿಸಿದ್ದರು ಎಂದರೆ ಸರಿ. ನಾನು ಮತ್ತು ಉಳಿದ ಪ್ರತಿವಾದಿಯರು ವಕೀಲರ ಮೂಲಕ ಹಾಜರಾಗಿದ್ದೆವು ಎಂದರೆ ಸರಿ. ಟಿ ಆರ್ ಗುರುಬಸವರಾಜ ವಕೀಲರ ಮೂಲಕ ಹಾಜರಾಗಿ ನಾನು ತಕರಾರು ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಪ್ರತಿವಾದ ಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ಆ ಸಂಧರ್ಭದಲ್ಲಿ ನನ್ನ ಅಣ್ಣ ಈಶ್ವರಪ್ಪ ಮತ್ತು ಮಹಾದೇವಮ್ಮ ರವರ ಸಂಬಂಧದ ಬಗ್ಗೆ ನಾನು ಏನು ಹೇಳಿ ಬರೆಸಿದ್ದೆ ಎಂದರೆ ಈಶ್ವರಪ್ಪ ಆ ಕೇಸಿನಲ್ಲಿ ಇರಲಿಲ್ಲ. ಸದರಿ ಕೇಸಿನ ಸಂಪೂರ್ಣ ಕಡತವನ್ನು ಈ ಕೇಸಿನ ವಕೀಲರಿಗೆ ಕೊಟ್ಟಿದ್ದೇನೆ. ಈಶ್ವರಪ್ಪ ಮದುವೆ ಆಗದೇ ಮರಣ ಹೊಂದಿದ್ದಾರೆ ಎಂದು ಓ ಎಸ್ 31/2005 ರ ಪ್ರತಿವಾದ ಪತ್ರದಲ್ಲಿ ನಾನು ಹೇಳಿ ಬರೆಸಿದ್ದೆ ಎಂದರೆ ಸರಿ. ಮಹಾದೇವಮ್ಮ ಏನು ಪರಿಹಾರ ಕೋರಿ ದಾವೆ ಹೂಡಿದ್ದರು ಅಂತಾ ಮಾಹಿತಿ ಇದೆ. ಸದರಿ ದಾವಾದ ದಾಖಲೆಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ಈಗ ಓ ಎಸ್ ನಂಬರ 31/2005 ರ ವಾದ ಪತ್ರದ ದೃಢಿಕೃತ ನಕಲನ್ನು ತೋರಿಸಿದಾಗ ಸಾಕ್ಷಿ ನೋಡಿ ಒಪ್ಪಿಕೊಳ್ಳುತ್ತಾರೆ. ನಾನು ಓ ಎಸ್ ನಂಬರ 31/2005 ರಲ್ಲಿ ತಕರಾರನ್ನು ಸಲ್ಲಿಸಿದ್ದೆ ಎಂದರೆ ಸರಿ. ಸಾಕ್ಷಿಗೆ ಈಗ ಸದರಿ ತಕರಾರಿನ ದೃಢಿಕೃತ ನಕಲನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿ ಪಿ 25 ಅಂತಾ ಗುರುತಿಸಲಾಯಿತು. ಸದರಿ ಕೇಸ್ ನಲ್ಲಿ ಮಹಾದೇವಮ್ಮ ಖುದ್ದಾಗಿ ಸಾಕ್ಷಿ ನುಡಿದಿರುತ್ತಾರೆ ಎಂದರೆ ಸರಿ. ಮಹಾದೇವಮ್ಮನ ಪರವಾಗಿ ಯಾರು ಯಾರು ಸಾಕ್ಷಿ ನುಡಿದಿದ್ದರು ಅಂತಾ ನನಗೆ

ಮಾಹಿತಿ ಇಲ್ಲಾ. ಓ ಎಸ್ ನಂಬರ 31/2005 ರ ಸಂಪೂರ್ಣ ಕಡತವನ್ನು ಪಡೆದುಕೊಳ್ಳಲು ನನಗೆ ತೊಂದರೆ ಇರಲಿಲ್ಲ. ಓ ಎಸ್ ನಂಬರ 31/2005 ರ ಸಂಪೂರ್ಣ ಕಡತವನ್ನು ಪಡೆದುಕೊಂಡಿದ್ದರೆ ಮಹಾದೇವಮ್ಮ ಏನು ಸಾಕ್ಷಿ ನುಡಿದಿದ್ದರು , ಸಾಕ್ಷಿದಾರರು ಯಾರು ಯಾರು ಅಂತಾ ಗೊತ್ತಾಗುತ್ತಿತ್ತು ಎಂದರೆ ಸರಿ. ಮಹಾದೇವಮ್ಮನ ಪರವಾಗಿ ಮಂಜಪ್ಪ, ಬಸವರಾಜಪ್ಪ, ಸುಜಾತಳ ತಂದೆ ನಂಜಪ್ಪ ಸಾಕ್ಷಿ ನುಡಿದಿದ್ದರು. ನಮ್ಮ ವಕೀಲರು ಮಹಾದೇವಮ್ಮ ರವರನ್ನು ಪಾಟೀ ಸವಾಲು ಮಾಡಿರುತ್ತಾರೆ ಎಂದರೆ ಸರಿ. ಮಹಾದೇವಮ್ಮ ನಮ್ಮ ಪಾಟೀ ಸವಾಲಿಗೆ ಸಮಂಜಸ ಉತ್ತರ ಕೊಟ್ಟಿದ್ದಾರೆ ಎಂದರೆ ಸರಿ. ನಾನು ಕೂಡ ಸಾಕ್ಷಿ ವಿಚಾರಣೆಗೆ ಒಳಪಟ್ಟಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಕೂಡ ಮಹಾದೇವಮ್ಮ ಮತ್ತು ಈಶ್ವರಪ್ಪನ ಸಂಬಂಧದ ಬಗ್ಗೆ ಪ್ರಶ್ನೆ ಕೇಳಲಾಗಿತ್ತು ಎಂದರೆ ಸರಿ. ಆ ಕೇಸಿನಲ್ಲಿ ನಾನು ಮಹಾದೇವಮ್ಮ ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಿಲ್ಲಾ ಅಂತಾ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆಂದರೆ ಸರಿ. ಆ ಸಮಯದಲ್ಲಿ ನನಗೆ ಮಹಾದೇವಮ್ಮ ನನ್ನ ಚಿಕ್ಕಪ್ಪನ ಹೆಂಡತಿ ಅಂತಾ ಗೊತ್ತಿರಲಿಲ್ಲ. 2005 ರಲ್ಲಿ ಮಹಾದೇವಮ್ಮ ಸಮಕಾಲಿನವರು ನಮ್ಮ ಸಂಬಂಧಿಕರಲ್ಲಿ ಬಹಳಷ್ಟು ಜನ ಬದುಕಿದ್ದರು ಎಂದರೆ ಸರಿ. ಓ ಎಸ್ ನಂಬರ 31/2005 ರ ನೋಟಿಸು ನನಗೆ ತಲುಪಿತು ಎಂದರೆ ಸರಿ. ನಂತರ ನಮ್ಮ ಸಂಬಂಧಿಕರಿಗೆ ವಿಚಾರಿಸಿ ಮಹಾದೇವಮ್ಮ ಯಾರು ಅಂತಾ ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. ನಮ್ಮ ಸಂಬಂಧಿಕರಿಗೆ ವಿಚಾರಿಸಿದಿದ್ದರೆ ಮಹಾದೇವಮ್ಮ ಯಾರು ಅಂತಾ ಗೊತ್ತಾಗುತ್ತಿತ್ತು ಎಂದರೆ ನಮ್ಮ ಸಂಬಂಧಿಕರಲ್ಲಿ ಮಹಾದೇವಮ್ಮ ರವರಿಗಿಂತ ಸಣ್ಣ ವಯಸ್ಸಿನವರು ಇದ್ದರು. ತೆಂಬದ ಮನೆತನ ಮತ್ತು ಸಣ್ಣ ಮನೆತನದವರ ನಡುವೆ ಬಹಳ ಮದುವೆ, ನೆಂಟತನ ನಡೆದಿತ್ತು ಎಂದರೆ ಸರಿ. ಸಾಕ್ಷಿ ಮಹಾದೇವಮ್ಮನ ತಂಗಿಯನ್ನು ನಮ್ಮ ಕುಟುಂಬಕ್ಕೆ ಮದುವೆ ಮಾಡಿಕೊಡಲಾಗಿತ್ತು ಅಂತಾ ಸ್ವಂತ ಹೇಳುತ್ತಾರೆ. ಹೀಗಾಗಿ ನನಗೆ ಮಹಾದೇವಮ್ಮನ ಸಂಬಂಧದ ಬಗ್ಗೆ ಗೊತ್ತಿತ್ತು ಎಂದರೆ ಸರಿ.

**(ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಹರಪನಹಳ್ಳಿ.